

# ಉಮ್‌ಗೋಟ್ ಮೇಘಗಳ ನಾಡಿನ ಕನ್ನಡಿ

ಮೇಘಾಲಯದ ಉಮ್‌ಗೋಟ್ 'ಪಾರದರ್ಶಕ ನದಿ'ಯೆಂದೇ ಪ್ರಸಿದ್ಧ. ಕನ್ನಡಿಯಂತೆ ಕಾಣಿಸುವ ಈ ನದಿಯಲ್ಲಿನ ದೋಣಿವಿಹಾರ ಸ್ವಪ್ನವಿಹಾರದಂತೆ ಭಾಸವಾಗುತ್ತದೆ. ನದಿಗಳ ಬಗ್ಗೆ ಸೆಳೆತವುಳ್ಳವರು, ಪ್ರಕೃತಿಯ ರಮಣೀಯ ಚೆಲುವಿಗೆ ಹಂಬಲಿಸುವವರು ಅನುಭವಿಸಲೇಬೇಕಾದ ಸೊಬಗು ಉಮ್‌ಗೋಟ್‌ನದು.

■ ಸುಶ್ಮಿತಾ ಮುಕುಂದ್ ಕಿರಸೂರ

ಮೇಘಾಲಯದ ಜೈನ್‌ತಿಯಾ ಹಿಲ್ಸ್ ಜಿಲ್ಲೆಯ ದಾವ್‌ಕಿ ಮೂಲಕ ಹಾದುಹೋಗುವ ಉಮ್‌ಗೋಟ್ ನದಿಯನ್ನು ಒಮ್ಮೆ ನೋಡಿದರೆ, ಭಾರತದ ನದಿಗಳ ಕುರಿತಾದ ನಮ್ಮ ಗ್ರಹಿಕೆಯೇ ತಲೆ ಕೆಳಗಾಗುತ್ತದೆ! ಅದೊಂದು ಸ್ಫಟಿಕ ಶುಭ್ರ ಜಲ ದೃಶ್ಯಕಾವ್ಯ!

ವಿಶ್ವದ ಇತರೆ ಭಾಗಗಳಲ್ಲಿ ಗಾಜಿನಂತೆ ತಿಳಿಯಾದ ನೀರಿನ ಅನೇಕ ನೈಸರ್ಗಿಕ ಮೂಲಗಳಿವೆ. ಜನಪ್ರಿಯ ಪ್ರವಾಸಿ ತಾಣಗಳಾಗಿ ಅಭಿವೃದ್ಧಿಗೊಂಡಿರುವ ಅವು ಪ್ರವಾಸಿಗರ ಆಕರ್ಷಣೆಯ ಕೇಂದ್ರಗಳೂ ಆಗಿವೆ. ಇಂಥ ಪಟ್ಟಿಯಲ್ಲಿ ಮಾಲ್ಡೀವ್ಸ್ ಮೊದಲ ಸ್ಥಾನದಲ್ಲಿದೆ. ಹಿತವಾದ ಬೆಚ್ಚನೆಯ ಬಿಸಿಲು, ಸುಂದರ ದ್ವೀಪಗಳು ಮತ್ತು ಸಮುದ್ರದ ಸ್ವಚ್ಛ ತಿಳಿ ನೀರು ಅಲ್ಲಿನ ಪ್ರಮುಖ ಆಕರ್ಷಣೆ. ಆಸ್ಟ್ರೇಲಿಯಾದ ಕ್ಯಾಥರಿನ್‌ಗೋರ್ಜ್, ಚೀನಾದ ಫೈವ್ ಫ್ಲವರ್ ಲೇಕ್, ಅಮೆರಿಕದ ಒರೆಗಾನ್ ರಾಜ್ಯದಲ್ಲಿರುವ ಕ್ರೇಟರ್ ಲೇಕ್, ಆಸ್ಟ್ರೇಲಿಯಾದ ಪಿಕ್ಕಾನಿನ್ನೀ ಪಾಂಡ್, ಜಪಾನ್‌ನ ಲೇಕ್ ಮಾಶು ಇವುಗಳ ಸಾಲಿಗೆ ಸೇರುತ್ತವೆ. ಇವುಗಳಲ್ಲಿ ಕೆಲವು ಕೆರೆಗಳು, ಕೊಳಗಳು ಮತ್ತು ನದಿಗಳು. ಉಳಿದೆಲ್ಲವೂ ಸಮುದ್ರಗಳು. ಅವೆಲ್ಲವೂ ಸ್ವಚ್ಛ, ಸ್ಫಟಿಕ ಶುಭ್ರ ಮತ್ತು ನೈಸರ್ಗಿಕ.

## ಕನ್ನಡಿ ನದಿ

ಇತ್ತೀಚೆಗೆ ಮೇಘಾಲಯ (ಮೇಘಗಳ ಆಲಯ) ಪ್ರವಾಸದ ವೇಳೆ, ನಾವು ಇನ್ನೂ ಹೊರಜಗತ್ತಿನ ಪಾಲಿಗೆ ಬಹುತೇಕ ಅಜ್ಞಾತವಾಗಿಯೇ ಉಳಿದಿರುವ ದಾವ್‌ಕಿಯ ಉಮ್‌ಗೋಟ್ ನದಿಗೆ ಭೇಟಿ ನೀಡಿದೆವು. ಭಾರತದ ಅತ್ಯಂತ ಶುದ್ಧವಾದ ಈ ನದಿಯನ್ನು 'ಪಾರದರ್ಶಕ ನದಿ' ಎಂತಲೂ ಕರೆಯಲಾಗುತ್ತದೆ.

ಒಂದು ಮುಂಜಾನೆ ಶಿಲ್ಲಾಂಗ್‌ನಿಂದ ದಾವ್‌ಕಿಗೆ ನಮ್ಮ ಪ್ರಯಾಣ ಆರಂಭವಾಯಿತು. ಘಾಟ್‌ನಲ್ಲಿ ತಿರುವುಗಳ ಮೂಲಕ ಸಾಗುವ 70 ಕಿ.ಮೀ. ಹಾದಿಯು ನಮಗೆ ಇಕ್ಕೆಲಗಳಲ್ಲೂ ಈಶಾನ್ಯ ಭಾರತದ ಸಸ್ಯ ಸಂಕುಲದ ದರ್ಶನವನ್ನು ಒದಗಿಸುತ್ತದೆ. ದಾರಿಯುದ್ದಕ್ಕೂ ತೇಲುವ ಬಿಳಿ ಮೋಡಗಳನ್ನು ಭೇದಿಸಿಕೊಂಡು ತಿರುವುಗಳ ಮೂಲಕ ಸಾಗುವ ಅನುಭವವೇ ಅನನ್ಯ. ಹಸಿರಿನಿಂದ ಆವೃತವಾದ ಗಿರಿಶಿಖರ–ಕಣಿವೆಗಳ ಪ್ರಕೃತಿ, ಮೋಡಗಳೇ ಧರೆಗಿಳಿದ ಅನುಭೂತಿ! ದೇಹವನ್ನು ಹದವಾಗಿ ಸ್ಪರ್ಶಿಸಿ ತೇಲಿ ಹೋಗುವ ಕೋಮಲ, ತಣ್ಣನೆ ಮೋಡಗಳು ಮೈಮನಗಳಲ್ಲಿ ಹೊಸ ಚೈತನ್ಯ ಮೂಡಿಸಿ ಪುಳಕಿತಗೊಳಿಸುತ್ತವೆ. ಈ ದಾರಿಯಲ್ಲಿ ಸಾಗುವ ಯಾರಿಗೇ ಆದರೂ ಇಂತಹ ನಿಸರ್ಗ ರಮಣೀಯತೆಯಲ್ಲಿ ತಾವೂ ಬೆರೆತು ಬಿಡಬಾರದೇಕೆ ಎಂಬ ಬಯಕೆಯನ್ನು ಅದುಮಿಟ್ಟುಕೊಳ್ಳುವುದು ಕಷ್ಟ.

ಪ್ರಯಾಣದ ಹಾದಿಯುದ್ದಕ್ಕೂ ನಾವು ಅಲ್ಲಲ್ಲಿ ಕಾರಿನಿಂದ ಕೆಳಗಿಳಿದು, ರಾಜ ಗಾಂಭೀರ್ಯದಿಂದ ಮೆರವಣಿಗೆ ಹೊರಟಿದ್ದ ಮೋಡಗಳ ಮಧ್ಯೆ ಹೆಜ್ಜೆ ಹಾಕಿದೆವು. ಅಲೆ ಅಲೆಯಾಗಿ ತೇಲಿ ಬರುತ್ತಿದ್ದ ತಣ್ಣನೆಯ ಕುಳಿರ್ಗಾಳಿಯ ಸ್ಪರ್ಶವನ್ನು ಅನುಭವಿಸುತ್ತಾ ಸುತ್ತಲಿನ ಸ್ವರ್ಗ ಸದೃಶ ನಿಸರ್ಗ ಸೌಂದರ್ಯದಲ್ಲಿ ಅಕ್ಷರಶಃ ಮಿಂದೆದ್ದೆವು.

## ಹಸಿರು-ಮಂಜಿನ ಯುಗಳ

ದಟ್ಟ ಮಂಜು, ಮೋಡ ಕವಿದ ಅಲ್ಲಿನ ವಾತಾವರಣದಲ್ಲಿ ವಾಹನ ಚಾಲನೆ ಮಾಡುವುದೇ ಒಂದು ಸಾಹಸ. ತೀರ ಹತ್ತಿರಕ್ಕೆ ಬರುವವರೆಗೂ